ನಗರ ವಿದ್ಯಾರ್ಥಿಗಳ ಸಮನ್ವಯತೆಯನ್ನು ಪಡೆದುಕೊಳ್ಳುತ್ತಿರುವುದು ವಿಶೇಷವಾಗಿದೆ. ಇದು ಭವಿಷ್ಯ ಹೊಸ ಸಮಾಜಕ್ಕೆ ನಾಂದಿಯಾಗುತ್ತದೆ. ಇದರ ಜೊತೆಗೆ ಕಾಲೇಜು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಗತಿಯನ್ನು ಸಾಧಿಸಲಿ" ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಖ್ಯ ನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ. ಜಿ. ಬೆಟ್ಸೂರುಮಠ ಕಾಲೇಜನ್ನು ಕಟ್ಟಿಬೆಳೆಸಿದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರಿಗೆ, ಸುವರ್ಣಮಹೋತ್ಸವ ಸಮಿತಿಯ ಸಂಚಾಲಕರಾದ ಪ್ರೊ.ಡಿ.ಎಸ್.ಸದಾಶಿವಮೂರ್ತಿಯವರಿಗು ಮತ್ತು ಇದುವರೆಗೂ ಕಾರ್ಯನಿರ್ವಹಿಸಿದ ಪ್ರಾಂಶುಪಾಲರುಗಳೆಲ್ಲರಿಗೂ ಅಭಿನಂದನಪೂರ್ವಕವಾಗಿ ಸನ್ಮಾನಮಾಡಿದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತ ಕೋರಿದರು. ಪ್ರೊ. ಡಿ. ಎಸ್. ಸದಾಶಿವಮೂರ್ತಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಸಾಂಸ್ಕೃತಿಕಮಹೋತ್ಸವದ ವರದಿಯನ್ನು ಮಂಡಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್.ಸೋಮಶೇಖರ ಅವರು ವಂದಿಸಿದರು. ಜೆಎಸ್‌ಎಸ್ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ. ಬಿ. ಸುರೇಶ್‌ರವರು, ಜೆಎಸ್‌ಎಸ್ ಮಹಾವಿದ್ಯಾಪೀಠದ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ,
ಸಂಪಾದಕರು
----------------------
----------------------